Indian Journal of History and Archaeology

ISSN (E):2582-225X
VOL-2, ISSUE -5,JANUARY-FEBRUARY, 2021, 08-16

# “ಮುಂಬೈ ಪ್ರೆಸಿಡೆನ್ಸಿಯ ಬೆಳಗಾವಿ ಪ್ರದೇಶ–ಚಾರಿತ್ರಿಕ ಗ್ರಹಿಕೆ”

**ಶ್ರೀಮತಿ ಬಿಸ್ಮಿಲ್ಲಾಬೇಗಂ ಕಾಲಮಿರ್ಚಿ**

**ಶ್ರೀಮತಿಬಿಸ್ಮಿಲ್ಲಾಬೇಗಂ ಕಾಲಮಿರ್ಚಿ**
ಸಂಶೋಧನಾವಿದ್ಯಾರ್ಥಿ
ಡಾ.ಆ.ನೇಉಪಾದ್ಯೆವಿಸ್ತರಣಾ ಕೇಂದ್ರ .
ಭರತೇಶಶಿಕ್ಷಣಸಂಸ್ಥೆ
ಕನ್ನಡ ವಿಶ್ವವಿದ್ಯಾಲಯ ಬೆಳಗಾವಿ

ಬೆಳಗಾವಿ ತನ್ನ ಆಹ್ಲಾದಕರ ವಾಯುಗುಣ ಸಿಹಿಯಾದ ನೀರು, ಸಮೃದ್ಧವಾದ ಬೆಳೆ, ದಕ್ಷಿಣ ಕಾಶಿ ‘ಶಿಕ್ಷಣ ಕೇಂದ್ರ’ ಮತ್ತು ‘ದೂಸರಾ ಮಹಾಬಳೇಶ್ವರ’ ಎಂದು ಗುರುತಿಸಲ್ಪಡುವುದು ಬೆಳಗಾವಿಯ ವಿಶೇಷ. ಬೆಳಗಾವಿಯು ಪ್ರಾಚೀನ ನಗರಗಳಲ್ಲಿ ಒಂದು ಎಂದು ಹೇಳುವುದಕ್ಕೆ ಪುರಾತತ್ವ ಪುರಾವೆಗಳು ಲಭಿಸಿವೆ. ಇದಕ್ಕೂ ಪೂರ್ವದ ಇತಿಹಾಸಕ್ಕೆ ಸಂಬಂಧಿಸಿದಂತೆ ಕ್ರಿ.ಶ. 1884ರಲ್ಲಿ ಕೊಣ್ಣೂರ ಗ್ರಾಮದ ಬಳಿ 100 ಕ್ಕೂ ಹೆಚ್ಚು ಬೃಹತ ಶಿಲಾ ಸಂಸ್ಕೃತಿಗೆ ಸಂಬಂಧಿಸಿದ ಗೋರಿಗಳು ಮತ್ತು ನೂತನ ಶಿಲಾ ಯುಗ ಸಂಸ್ಕೃತಿಯ ಕ್ರಿ.ಪೂ. 2000–1000ರವರೆಗೆ ಒಂದು ವಿಶಿಷ್ಟ ಪ್ರಕಾರದ ಕೊಡಲಿ ಸಿಕ್ಕಿದ್ದನ್ನು ರಾಬರ್ಟ ಬ್ರೂಸ್ ಫೂಟ್ ರವರ ವರದಿಯಿಂದ ತಿಳಿದು ಬರುತ್ತದೆ ಹಾಗೂ ಬೆಳಗಾವಿಯ ಕ್ಯಾಂಪ ಪ್ರದೇಶದ ಬಳಿಯ ಪುರಾತನ ಬಾವಿಯ ಅವಶೇಷಗಳು ಅಲ್ಲದೆ ನಾಗರಕೆರೆ ನಾಗರಝರಿ ಎಂಬ ಹೆಸರಿನ ಭಾರಿಗಾತ್ರದ ಕೆರೆಯೊಂದು ಈ ಪ್ರದೇಶದ ಮೇಲ್ಭಾಗದಲ್ಲಿ ಅಸ್ತಿತ್ವದಲ್ಲಿತ್ತು. ಗೊವೆ ಅಗಸಿಯ ಬಸ್ ನಿಲ್ದಾಣದ ಕೆಳಗಡೆಯಿಂದ ಈ ಕೆರೆಯ ಒಂದು ಕೋಡಿ ಈಗಲೂ ಹರಿಯುತ್ತಿರುವುದು ಕಂಡು ಬರುತ್ತದೆ.

ಬೆಳಗಾವಿಯಲ್ಲಿ ಶಾತವಾಹನರ ಕಾಲಕ್ಕೆ ಸಂಬಂಧಿಸಿದರ ಬಗ್ಗೆ ಈಗಿನ ಹಳೆಯ ಬೆಳಗಾವಿ ವಡಗಾವಿಯ ಪೂರ್ವ ಭಾಗ ಮತ್ತು ಮಾಧವಪುರಗಳ ಪ್ರದೇಶಗಳನ್ನೊಳಗೊಂಡಿತ್ತು. ಇಲ್ಲಿ ಶಾತವಾಹನರ ಕಾಲದ ನಗರಾವಶೇಷಗಳು

ಪತ್ತೆಯಾಗಿರುವುದು ಕ್ರಿ.ಶ.ಪೂರ್ವ 1 ನೇ ಶತಮಾನದ ಬ್ರಾಹ್ಮಿಲಿಪಿಯ ಶಾಸನ ಸಿಕ್ಕಿರುವುದು ಪುರಾತನ ನಗರಕ್ಕೆ ಒಂದು ರಕ್ಷಣಾ ಗೋಡೆ ಅಥವಾ ಕೋಟೆಕೂಡ ಇತ್ತು. ಇದರ ಅವಶೇಷ ರೂಪದ ಅಡಿಪಾಯ ಈಗ ಪತ್ತೆಯಾಗಿರುವ ಸನ್ನತಿ (ಕಲಬುರ್ಗಿ ಜಿಲ್ಲೆ) ಯ ತರವಾಯ ಇಂಥದೊಂದು ದೊಡ್ಡನಗರ ಅವಶೇಷಗಳು ಪತ್ತೆಯಾಗಿರುವುದು ಬೆಳಗಾವಿ ನಗರದಲ್ಲಿಯೇ ಎಂದು ಹೇಳಲಾಗುತ್ತದೆ.

ಈಗಿರುವ ದೊಡ್ಡ ಕೋಟೆಯ ಮೇಲ್ಬಾಗ ಮುಸಲ್ಮಾನ ಆಡಳಿತಗಾರರಿಂದ ನಿರ್ಮಿಸಲ್ಪಟ್ಟಿದೆ ಎಂದು ಕಂಡು ಬಂದರೂ ಕೆಳಗಿನ ಸ್ತರದಲ್ಲಿ ಕದಂಬರರ ಕಾಲಾವಧಿಗೆ ಸೇರಿದ ರಚನೆ ಇದೆ. ಅದರ ಮೇಲೆ ಚಾಲುಕ್ಯ ರಾಷ್ಟ್ರಕೂಟರ ಕಾಲದ ರಚನೆಯೂ ಇವೆ ಎಂದು ಡಾ.ಎಸ್.ಕೆ.ಜೋಷಿ ಅಭಿಪ್ರಾಯ ಪಡುತ್ತಾರೆ. ಕ್ರಿ.ಶ 1204 ರಲ್ಲಿ ರಟ್ಟರ ವಂಶದ ನಾಲ್ಮಡಿ ಕಾರ್ತವೀರ್ಯನ ರಾಜಧಾನಿಯಾಗಿತ್ತು ಎಂದು ಅದಕ್ಕೆ "ವೇಣುಗ್ರಾಮ" ಎಂದು ಹಾಗೂ ಹೆಚ್ಚು ಬಿದಿರು ಬೆಳೆಯುವ ಪ್ರದೇಶವಾದ ಕಾರಣ "ಇಕ್ಷುಗ್ರಾಮಗಳೆಂದು" ಹೆಸರುಗಳಿದ್ದವೆಂದು ಬೆಳಗಾವಿಯ "ಸೂಫಾ" ಮಸೀದಿಯಲ್ಲಿ ಉಲ್ಲೇಖವಿದೆ. ನಂತರದಲ್ಲಿ ಕಲ್ಯಾಣ ಚಾಲುಕ್ಯರು ರಟ್ಟರು ಮತ್ತು ಗೋವೆಯ ಕದಂಬರು, ದೇವಗಿರಿಯ ಯಾದವರು, ವಿಜಯನಗರದ ಅರಸರ ಕಾಲಕ್ಕೆ ಇದು ಒಳಪಟ್ಟಿತ್ತು. ಕ್ರಿ.ಶ. 1375 ರಿಂದ 1472 ರವರೆಗೆ ವಿಜಯನಗರದ ಆಡಳಿತಕೊಳಪಟ್ಟಿತ್ತು. ಕ್ರಿ.ಶ. 1472-73 ರಲ್ಲಿ ಬೆಳಗಾವಿ ಪ್ರದೇಶ ವಿಜಯನಗರದ ಕೈ ತಪ್ಪಿ ಬಿಜಾಪುರದ ಸುಲ್ತಾನರ ವಶವಾಯಿತು. ಪ್ರಮುಖವಾಗಿ 'ಅಸದ್‌ಖಾನ್' ಎಂಬ ಸರದಾರನು ಬೆಳಗಾವಿಯನ್ನು ಕ್ರಿ.ಶ. 1511 ರಿಂದ 1549 ರ ವರೆಗೆ ಆಳಿದನು ಇವನ ಆಡಳಿತ ಕಾಲದಲ್ಲಿ ಮುಸ್ಲಿಂ ಪ್ರಭಾವಕ್ಕೆ ಒಳಪಟ್ಟು ಬೆಳಗಾವಿಗೆ ಅಝುಮ ನಗರವೆಂದು ಕರೆಯಲಾಗುತ್ತಿತ್ತು. ಕ್ರಿ.ಶ. 1550 ರಲ್ಲಿ ಶಹಾಶೇರಖಾನನ ಬೆಳಗಾವಿಯ ಶಹಾಪೂರವನ್ನು ನಿರ್ಮಿಸಿದ ಕ್ರಿ.ಶ 1583 ರ ಸುಮಾರಿಗೆ ಶಹಾಪೂರ ದೊಡ್ಡ ವ್ಯಾಪಾರಿ ಕೇಂದ್ರವಾಗಿತ್ತು ಎಂದು ತಿಳಿದು ಬರುತ್ತದೆ. ಕ್ರಿ.ಶ. 1583 ರಲ್ಲಿ ಮೊಘಲ ದೊರೆ ಔರಂಗಜೇಬನು ಶಿವಾಜಿಯೊಡನೆ ಬಿಜಾಪುರ ಆದಿಲ್‌ಶಾಹ ಸೇತು ಒಪ್ಪಂದ ಮಾಡಿಕೊಂಡನು. ಅವನು ತೀರಿಕೊಂಡ ನಂತರ ಬೆಳಗಾವಿಯನ್ನು ಕೊಳ್ಳೆ ಹೊಡೆದನು. ಹಾಗೂ ಬೆಳಗಾವಿಯ ಬಹುಭಾಗ ಶಿವಾಜಿ ಮಹಾರಾಜನ ಅಧಿಪತ್ಯದಲ್ಲಿ ಬರುವುದು, ಸವದತ್ತಿ ಹೂಲಿಗಳಲ್ಲಿ ಕೋಟೆ ಕಟ್ಟಿಸಿಕೊಂಡು ತನ್ನ ಆಡಳಿತಕೊಳಪಡಿಸಿದನು. ಶಿವಾಜಿಯು ನಂತರ ಶಾಹು ಹಾಗೂ ಸಂಭಾಜಿಯವರಲ್ಲಿ ಅನೇಕ ಪ್ರದೇಶಗಳ ಹಂಚಿಕೆಯಾಗಿ ಶಾಹುವಿಗೆ ಬೆಳಗಾವಿ, ಖಾನಾಪೂರ ಬಹುಭಾಗ ಬಂದಿತು. ಕ್ರಿ.ಶ 1734 ರಲ್ಲಿ ನವಲಗುಂದದ ಜಾಯಪ್ಪ ದೇಸಾಯಿಗೆ ಉಂಬಳಿಯಾಗಿ 'ಪರಸಗಡ' ಪ್ರದೇಶ ದೊರೆತಿತು. ಸವಣೂರಿನ ನವಾಬನು ಮರಾಠರೊಂದಿಗೆ ಒಪ್ಪಂದ ಮಾಡಿಕೊಂಡು ಕ್ರಿ.ಶ. 1746 ರಲ್ಲಿ ಪಾಶ್ಚಾಪೂರ, ಕಿತ್ತೂರು ಮುಂತಾದ ಪ್ರದೇಶಗಳನ್ನು ಒಳಗೊಂಡಂತೆ 36 ಜಿಲ್ಲೆಗಳನ್ನು ಮರಾಠರಿಗೆ

ಬಿಟ್ಟುಕೊಟ್ಟನು. ಕ್ರಿ.ಶ. 1755 ರಲ್ಲಿ ಪೇಶ್ವೆ ಬಾಳಾಜಿರಾಯನು ಸವಣೂರಿನ ನವಾಬನ ಮೇಲೆ ದಾಳ ಮಾಡಿ ಬೆಳಗಾವಿ ಕೋಟೆಯನ್ನೊಳಗೊಂಡ ಒಟ್ಟು 11 ಜಿಲ್ಲೆಗಳನ್ನು ಮರಾಠಾ ಸಾಮ್ರಾಜ್ಯಕ್ಕೆ ಸೇರಿಸಿದನು.

1818 ರಲ್ಲಿ ಮಾರ್ಚ 14 ರಂದು ಜನರಲ್ ಮುನ್ರೋ ಬೆಳಗಾವಿಯ ಕೋಟೆಯ ಮೇಲೆ ದಾಳ ಮಾಡಿ, ಇಂಗ್ಲೀಷರು ಮರಾಠರಿಂದ ಬೆಳಗಾವಿಯನ್ನು ಕಿತ್ತುಕೊಂಡರು ಬ್ರಿಟಿಷರ ಕೈ ಸೇರಿದ ಬೆಳಗಾವಿ ಮೊದಲು ಬಳ್ಳಾರಿ ಜಿಲ್ಲೆಯ ಒಂದು ಭಾಗವಾಯಿತು. 1836 ರಲ್ಲಿ ಬೆಳಗಾವಿ ಒಂದು ಪ್ರತ್ಯೇಕ ಜಿಲ್ಲೆಯಾಯಿತು. ಹತ್ತೊಂಭತ್ತನೆ ಶತಮಾನದ ಉತ್ತರಾರ್ಧದಲ್ಲಿ ಬ್ರಿಟಿಷರು ತಮ್ಮ ಹಿಡಿತಕ್ಕೊಳಪಟ್ಟಿದ್ದ ಪ್ರದೇಶಗಳನ್ನು ವಿವಿಧ ಆಡಳತದ ಪರಿಧಿಯಲ್ಲಿ ಹಂಚಿಹೋಗಿದ್ದ 22 ಭೂ ಪ್ರದೇಶಗಳನ್ನು ಜೊತೆಗೆ 3 ಕಂಟೋನ್ಮೆಂಟಗಳನ್ನು ಒಂಭತ್ತು ಜಹಾಗೀರಗಳನ್ನು ಬ್ರಿಟಿಷ ಅಧಿಕಾರಿಗಳು ಕೋರ್ಟ, ಕಛೇರಿ, ಕಾನೂನು, ಪೋಲೀಸ್, ಸೇನೆ, ಶಿಕ್ಷಣ, ಕಂದಾಯ, ಆಡಳತ ವಿಚಾರಗಳಲ್ಲಿ ತೊಡಕುಗಳನ್ನು ನಿವಾರಿಸಿಕೊಳ್ಳಲು 5 ಪ್ರಮುಖ ಘಟಕಗಳಾಗಿ ವಿಂಗಡಿಸಿದರು. ಇವುಗಳಲ್ಲಿ  ಮುಂಬೈ ಕರ್ನಾಟಕವು ಒಂದು, ಮುಂಬೈ ಕರ್ನಾಟಕದ ನಾಲ್ಕು ಜಿಲ್ಲೆಗಳಾದ ಬಿಜಾಪೂರ, ಧಾರವಾಡ, ಬೆಳಗಾವಿ, ಉತ್ತರಕನ್ನಡ ಜಿಲ್ಲೆಗಳು ಹಾಗೂ ಬ್ರಿಟಿಷರ ಸೇನೆ ಇದ್ದಂಥ ಬೆಳಗಾವಿ 'ದಂಡು ಮಂಡಲ' ಅಥವಾ 'ಕಂಟೋನ್ಮೆಂಟ್' ಪ್ರದೇಶವು ಒಂದು ಈ ಭಾಗದವರಿಗೆ ಪುಣೆಯೇ ಕೇಂದ್ರ ಸ್ಥಳ ಪುಣೆ-ಮುಂಬಾಯಿಗಳು ಸರ್ಕಾರದ ಪ್ರಮುಖ ಸ್ಥಳಗಳು ಹಾಗೂ ಉನ್ನತ ವ್ಯಾಸಂಗದ ಶೈಕ್ಷಣಿಕ ಕೇಂದ್ರಗಳು ಆಗಿದ್ದವು. ಮುಂಬೈ ಕರ್ನಾಟಕವು "ಸದರ್ನ ಮರಾಠ ಕಂಟ್ರಿ" (ದಕ್ಷಿಣ ಮಹಾರಾಷ್ಟ್ರ) ಎಂದು ಕರೆಯಲ್ಪಡುತ್ತಿತ್ತು. ಧಾರವಾಡದಲ್ಲಿ ಕೇಂದ್ರ ರೈಲ್ವೆ ಕಛೇರಿ ಇದ್ದು "ಸದರ್ನ ಮರಾಠ ರೈಲ್ವೆ" ಎಂದು ಕರೆಯಲ್ಪಡುತ್ತಿತ್ತು. ದಕ್ಷಿಣ ಮಹಾರಾಷ್ಟ್ರ ಪ್ರದೇಶವೆಲ್ಲ ಕನ್ನಡ ನಾಡೆ ಆಗಿದೆ ಎಂದು ಡಬ್ಲ್ಯೂ ಎ ರಸೂಲ್ & ಜೆ.ಪಿ. ಫ್ಲೀಟ್ ಅವರು ಅಭಿಪ್ರಾಯ ಪಡುತ್ತಾರೆ. ಕ್ರಿ.ಶ. 1921 ರಲ್ಲಿ ಕಾಂಗ್ರೇಸ್ ತನ್ನ ಆಡಳತದ ಸೌಕರ್ಯಕ್ಕಾಗಿ ಭಾಷಾವಾರು ಪ್ರಾಂತ್ಯ ರಚನೆ ಮಾಡಿದಾಗ ಬೆಳಗಾವಿ ಪ್ರದೇಶವನ್ನು ಕರ್ನಾಟಕ ಪ್ರಾಂತ್ಯಕ್ಕೆ ಸೇರಿಸಿತು. 1924 ರಲ್ಲಿ ಅಖಿಲ ಭಾರತೀಯ ಕಾಂಗ್ರೇಸ್ ಅಧಿವೇಶನ ಕರ್ನಾಟಕದಲ್ಲಿಯೇ ನಿರ್ಣಯವಾದಾಗ ಬೆಳಗಾವಿಯಲ್ಲಿಯೇ ಅನಂತರದ ಎರಡು ಅಧಿವೇಶನಗಳು ಇಲ್ಲಿಯೇ ಜರುಗಿವೆ. ಪ್ರಾರಂಭದಿಂದ ನೋಡಲಾಗಿ ಮಹಾರಾಷ್ಟ್ರ ಮತ್ತು ಕರ್ನಾಟಕ ಭಾಗಗಳು ಅಖಂಡವಾಗಿ ನಿರಂತರವಾಗಿ ಶಾತವಾಹನರ ಅರಸರು, ಚಾಲುಕ್ಯ, ಅರಸರು, ರಟ್ಟರು ಮತ್ತು ಕದಂಬರು, ಯಾದವರು,  ವಿಜಯನಗರ ಅರಸರಂತಹ ಅಪ್ಪಟ ಕನ್ನಡ ರಾಜವಂಶಗಳ ಆಡಳತಕ್ಕೆ ಅನೇಕ ಶತಮಾನಗಳ ಕಾಲ ಒಳಪಟ್ಟಿದ್ದರೂ ಮುಂಬೈ ಪ್ರೆಸಿಡೆನ್ಸಿಯ ಭಾಗವಾದ 1818 ರಿಂದ ಇಚೆಗೆ 2 ಶತಮಾನಗಳ ಪ್ರಭಾವವು ಹೆಚ್ಚು ಪ್ರಭಾವಿಸಲ್ಪಟ್ಟಿರುವುದು ಮರಾಠಿ ಪ್ರದೇಶದಂತೆ ಕಂಡು ಬಂದರೂ ಮರಾಠಿಯ ಪ್ರಭಾವಕೊಳಪಟ್ಟಿರುವದು ಹೆಚ್ಚು ಗೋಚರಿಸುತ್ತದೆ. ಅಪ್ಪಟ ಕನ್ನಡದ ನೆಲವಾದ ಬೆಳಗಾವಿಯು, ಅನೇಕ ಹಳ್ಳಿಗಳು ಹಾಗೂ ನಗರದ

ಕೆಲ ಭಾಗಗಳಲ್ಲಿಯೂ ಮರಾಠಿತನವಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಪ್ರಸ್ತುತವಾಗಿ ಇತಿಹಾಸದ ದೃಷ್ಟಿಯಿಂದ ಗಮನಿಸಿದಾಗ ಸುದೀರ್ಘವಾದ ಇತಿಹಾಸವು ಕೂಡ ಅಲ್ಪಾವಧಿಯ ಆಡಳಿತಕ್ಕೊಳಪಟ್ಟುದುದರ ಪ್ರಭಾವ ಹೆಚ್ಚು ಪ್ರತಿಬಿಂಬಿಸುವುದು ಕಂಡು ಬರುತ್ತದೆ.

ಬ್ರಿಟಿಷ್ ಆಡಳಿತಾವಧಿಯಲ್ಲಿ ಮುಂಬಾಯಿ ಪುಣೆಗಳಲ್ಲಿ ಸಾಮಾಜಿಕ, ಶೈಕ್ಷಣಿಕ ಸುಧಾರಣೆಯ ಪರ್ವ ಶುರುವಾಯಿತು. ಅದರ ಪರಿಣಾಮವಾಗಿ ಮುಂಬೈ ಪ್ರಾಂತ್ಯದ ಪ್ರಮುಖ ಪ್ರದೇಶವಾದ ಬೆಳಗಾವಿಯೂ ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಾಗೂ ಆಡಳಿತಾತ್ಮಕವಾಗಿ ಅಭಿವೃದ್ಧಿಯನ್ನು ಕಂಡಿತು. ಮುಂಬೈ ಪ್ರೆಸಿಡೆನ್ಸಿಯ ಆಡಳಿತದ ಅಂಗವಾಗಿ ಬೆಳಗಾವಿಯನ್ನು ಗುರುತಿಸಲಾಗುತ್ತದೆ. ಮುಂಬೈ ಪ್ರೆಸಿಡೆನ್ಸಿಯ ಪ್ರಮುಖ ಭಾಗಗಳಾದ ಅಹಮದಾಬಾದ್, ಪುಣೆ, ಮುಂಬೈ ಹಾಗೂ ಬೆಳಗಾವಿಯಲ್ಲಿ ಕಮೀಶನರ ಎಂಬ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದರು ಅವರ ಕಛೇರಿ ಬೆಳಗಾವಿಯಲ್ಲಿತ್ತು. ಪ್ರತಿ ಜಿಲ್ಲೆಯಲ್ಲಿ ಕಲೆಕ್ಟರಗಳು ಹಾಗೂ ಅಸಿಸ್ಟೆಂಟ್ ಕಲೆಕ್ಟರ ದರ್ಜೆಯ ಅಧಿಕಾರಿಗಳು ಈ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಗವರ್ನರಗಳು ಮುಂಬೈ ಹಾಗೂ ಪುಣೆಯಲ್ಲಿ ಇದ್ದರು ಅಲ್ಲಿ ಅವರ ಕಛೇರಿಗಳು ಕಾರ್ಯನಿರ್ವಹಿಸುತ್ತಿದ್ದವು. ಮುಂಬೈ ಪ್ರೆಸಿಡೆನ್ಸಿಯ ಪ್ರಭಾವಕ್ಕೊಳಪಟ್ಟ ಬೆಳಗಾವಿ ಪ್ರದೇಶವು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಾಗೂ ಆಡಳಿತಾತ್ಮಕವಾಗಿ ಮುಂದುವರೆದುದು ಕಂಡು ಬರುತ್ತದೆ. ಕರ್ನಾಟಕದ ಇತರ ಪ್ರಾಂತ್ಯಗಳಗಿಂತಲೂ ಬೆಳಗಾವಿ ಪ್ರದೇಶವು ಎಲ್ಲಾ ರೀತಿಯಿಂದಲೂ ಅಭಿವೃದ್ಧಿ ಹೊಂದಲು ಸಹಾಯಕವಾಗಿದೆ. ಅದು ಇಂದಿನ ಸಮಾಜದಲ್ಲಿಯೂ ಅದರ ಪ್ರಭಾವವನ್ನು ಗುರುತಿಸಿಕೊಳ್ಳುವಂತೆ ಮಾಡಿದೆ. ಪ್ರಸ್ತುತವಾಗಿಯೂ ಮುಂಬೈ ಪ್ರೆಸಿಡೆನ್ಸಿಯ ಪ್ರಭಾವವು ಬೆಳಗಾವಿ ಪ್ರದೇಶದಲ್ಲಿ ಹೆಚ್ಚಾಗಿ ಕಂಡು ಬರುತ್ತದೆ.

ಮರಾಠಿ ಪ್ರದೇಶವಾಗಿ 1668 ರಲ್ಲಿ ಮೊಘಲ್ ದೊರೆ ಔರಂಗಜೇಬನ ತರುವಾಯ ಬಿಜಾಪುರದ ಆದಿಲ್‌ಶಾಹಿಗಳ ಹಿಡಿತದಿಂದ ಶಿವಾಜಿ ಮಹಾರಾಜನ ಅಧಿಪತ್ಯಕ್ಕೆ ಒಳಗೊಂಡಾಗಿನಿಂದ ಶಿವಾಜಿಯ ನಂತರ ಶಾಹು ಮಹಾರಾಜನ ಆಡಳಿತಕ್ಕೆ ಒಳಪಟ್ಟು ಕ್ರಿ.ಶ. 1755 ರಲ್ಲಿ ಪೇಶ್ವೆ ಬಾಳಾಜಿರಾಯನು ಸವಣೂರಿನ ನವಾಬನ ಮೇಲೆ ದಾಳಿ ಮಾಡಿ ಬೆಳಗಾವಿ ಕೋಟೆಯನ್ನೊಳಗೊಂಡ 11 ಜಿಲ್ಲೆಗಳನ್ನು ಮರಾಠಾ ಸಾಮ್ರಾಜ್ಯಕ್ಕೆ ಸೇರಿಸಿದದು ಮರಾಠಾ ಆಡಳಿತದ ಪ್ರಭಾವ ಬೆಳಗಾವಿ ಪ್ರದೇಶದಲ್ಲಿ ಹೆಚ್ಚಾಗಿ ಕಂಡು ಬಂದುದುದರ ಹಿನ್ನೆಲೆಯಲ್ಲಿ ಆಡಳಿತದ ಭಾಷೆ ಮರಾಠಿ ಆಗಿರುವುದು ಹಾಗೂ ಆಡಳಿತದ ಕೇಂದ್ರ ಪೂನಾ, ಸತಾರಾ ಮಹಾರಾಷ್ಟ್ರ ಪ್ರದೇಶಗಳ ಆಡಳಿತ ವಾಗಿದ್ದುದರ ಪ್ರಭಾವ ಬೆಳಗಾವಿ ಪ್ರದೇಶದ ಮೇಲೆ ಇದ್ದುದು ಮರಾಠಿ ಭಾಷೆ ಹಾಗೂ ಮರಾಠಿ ಸಂಸ್ಕೃತಿ ಹೆಚ್ಚಾಗಿ ಕಂಡು ಬರಲು ಕಾರಣವೆನಿಸುತ್ತದೆ.

ಮರಾಠಿ ಪ್ರದೇಶದ ಪ್ರಭಾವ ಹಾಗೂ ಮರಾಠಿ ಆಡಳಿತಕ್ಕೊಳಪಟ್ಟುವರ ಹಿನ್ನೆಲೆಯಲ್ಲಿ ಬೆಳಗಾವಿ ಪ್ರದೇಶಗಳು ಕೆಲವು ಮರಾಠಾ ಪ್ರದೇಶಗಳಂತೆ ಮೇಲ್ನೋಟಕ್ಕೆ ಕಂಡು ಬಂದರು ರಾಷ್ಟ್ರಕೂಟರ ಆಡಳಿತ ಕಾಲದಿಂದಲೂ ಕರ್ನಾಟಕ, ಮಹಾರಾಷ್ಟ್ರ ಪ್ರದೇಶಗಳು ಸಂಪೂರ್ಣವಾಗಿ ಕನ್ನಡ ನಾಡಿನ ಭಾಗವಾಗಿದ್ದುದು ಬೆಳಗಾವಿ ಪ್ರದೇಶ ಅಚ್ಚ ಕನ್ನಡ ನಾಡು ಆಗಿದ್ದು ಕಂಡು ಬರುತ್ತದೆ. ಮರಾಠಾ ಆಡಳಿತಕ್ಕೆ ಒಳಪಟ್ಟು ಮೇಲೆ ಮರಾಠಾ ಭಾಷೆ ಆಡಳಿತ ಭಾಷೆಯಾಗಿದ್ದರೂ ಕರ್ನಾಟಕದ ಗಡಿ ಮತ್ತು ಮಹಾರಾಷ್ಟ್ರ ಗಡಿ ಹೊಂದಿಕೊಂಡಿರುವುದು ಸಂಬಂಧಗಳಲ್ಲಿ ಕೊಡು ತೆಗೆದುಕೊಳ್ಳುವ ಸಂಬಂಧಗಳು ನಡೆದಿರುವುದು ಸಂಸ್ಕೃತಿ, ಭಾಷೆ ಬೆಳವಣಿಗೆಗೆ ಹೊಸ ಆಯಾಮವನ್ನು ಒದಗಿಸಿ ಕನ್ನಡ–ಮರಾಠಿ ಸಾಂಸ್ಕೃತಿಕ ಬೆಳವಣಿಗೆಗೆ ಸಹಾಯಕವಾಯಿತು. ಬ್ರಿಟಿಷರ ಆಡಳಿತಕ್ಕೆ ಒಳಪಟ್ಟ ಮೇಲೂ ಬೆಳಗಾವಿಯಲ್ಲಿ 1832ರಲ್ಲಿ ಶಾಲೆಗಳು ಪ್ರಾರಂಭವಾದಾಗ ಪ್ರಾರಂಭದಲ್ಲಿ ಇಂಗ್ಲೀಷರು ತಮ್ಮ ಮಕ್ಕಳ ವಿಧ್ಯಾಭ್ಯಾಸಕ್ಕಾಗಿ ಇಂಗ್ಲೀಷ ಶಾಲೆಗಳನ್ನು ತೆರೆದರೂ ಸಹ ಮುಂಬೈ ಪ್ರಾಂತ್ಯದಲ್ಲಿ ಶಿಕ್ಷಣ ಮಾಧ್ಯಮ ಮರಾಠಿಯಾಗಿದ್ದರೂ ಸಹ ಮುಂಬೈ ಸರಕಾರ ಸಾ.ಶಕ 1835ರಲ್ಲಿ "ದಕ್ಷಿಣ ಮರಾಠ ಪ್ರಾಂತ್ಯವಾದ ಬೆಳಗಾವಿ ಪ್ರದೇಶದಲ್ಲಿ ಶಿಕ್ಷಣ ಕನ್ನಡದಲ್ಲಿ ನಡೆಯಬೇಕೆಂದು ನಿರ್ಣಯ ತೆಗೆದುಕೊಂಡು ಕನ್ನಡ ಶಾಲೆಗಳ ಸ್ಥಾಪನೆಗೆ ಮುಂದಾಯಿತು ಹಾಗೂ ಕನ್ನಡ ಪಠ್ಯ ಪುಸ್ತಕಗಳು ಸಾವಧಾನವಾಗಿ ಪ್ರಕಟವಾಗ ತೊಡಗಿದವು. ಡಬ್ಲ್ಯೂ.ಎ.ರಸೆಲ್, ವೆಂಕಟ ರಂಗೋ ಕಟ್ಟಿ, ಗಂಗಾಧರೇಶ್ವರ ತುರುಮುರಿ ಹಾಗೂ ಇನ್ನಿತರರ ಮಾರ್ಗದರ್ಶನದಲ್ಲಿ ಸಾ.ಶಕ 1864 ರಲ್ಲಿ ಕನ್ನಡ ಪಠ್ಯ ಪುಸ್ತಕಗಳು ಮುದ್ರಣಗೊಳ್ಳ ತೊಡಗಿದವು ಶಿಕ್ಷಣ ಖಾತೆಯಲ್ಲಿ ಅಧಿಕಾರಿಗಳಾದ ಡೆಪ್ಯೂಟಿ ಚನ್ನಬಸಪ್ಪ ಅವರ ಪ್ರಯತ್ನಗಳಿಂದ 1866 ರಿಂದ ಕನ್ನಡ ಮಾಧ್ಯಮ ಜಾರಿಗೆ ಬಂದಿತು. ಕ್ರಿ.ಶ 1878 ರಿಂದ ಮರಾಠಿಯ ಬದಲು ಕನ್ನಡವು ಬಂದಿತು. ಸಾ.ಶಕ 1817 ರಲ್ಲಿ ವಿಲಿಯಂ ಕ್ಯಾರಿಯವರ ಪ್ರಯತ್ನದಿಂದ "ಎ ಗ್ರಾಮರ್ ಆಫ್ ಕರ್ನಾಟಕ ಲಾಂಗ್ವೇಜ್" ಎಂಬ ಪುಸ್ತಕವು ಕಲ್ಕತ್ತೆಯ ಸಮೀಪದ ಶ್ರೀರಾಮಪುರದಲ್ಲಿ ಮುದ್ರಣಗೊಂಡಿತು. 19 ನೇ ಶತಮಾನದ ಕೊನೆಗೆ ಡಾ.ಶ್ರೀನಿವಾಸ ಹಾವನೂರ ರವರ ಎಣಿಕೆ ಪ್ರಕಾರ 86 ಕನ್ನಡ ಮುದ್ರಣಾಲಯಗಳಿದ್ದವು, ಅವು ಮದ್ರಾಸ್ (1804) ಮತ್ತು ಮುಂಬೈ (1824), ಅಂಬಾವಿಲಾಸ್ ಮುದ್ರಣಾಲಯ ಮೈಸೂರು (1840), ಬಳ್ಳಾರಿ (1826), ಸರಕಾರಿ ಮುದ್ರಣಾಲಯ ಬೆಂಗಳೂರು (1824), ಬಾಸಲ್ ಮಿಶನ್ ಛಾಪಾಖಾನೆ ಮಂಗಳೂರು (1847) ಮತ್ತು ಸುಬುದ್ಧಿ ಪ್ರಕಾಶನ ಛಾಪಾಖಾನೆ ಬೆಳಗಾವಿ (1849) ಇವು ಪ್ರಮುಖವು. ಇಡೀ ದೇಶದ್ಯಾಂತ ಕನ್ನಡ ಮುದ್ರಣಾಲಯಗಳು ಪಸರಿಸಿರುವುದು ಕರ್ನಾಟಕ ಮತ್ತು ಕನ್ನಡ ನೆಲೆ, ಭಾಷೆ ಹಿಂದಿನಿಂದಲೂ ತನ್ನ ಪ್ರಭಾವವನ್ನು ಉಳಿಸಿಕೊಂಡಿರುವುದು ಕಂಡು ಬರುತ್ತದೆ. ಮುಂಬೈ ಪ್ರೆಸಿಡೆನ್ಸಿಯ ಒಟ್ಟು ಜನಸಂಖ್ಯೆಯಲ್ಲಿ 1937 ರಲ್ಲಿ 1.11 ಕೋಟಿ ಜನ ಮರಾಠಿ

ಭಾಷಿಕರಾಗಿದ್ದರೆ 49 ಲಕ್ಷ ಜನ ಗುಜರಾತಿ ಮಾತನಾಡುವವರಿದ್ದರು ಹಾಗೂ 31 ಲಕ್ಷ ಜನ ಕನ್ನಡ ಮಾತನಾಡುವ ಕನ್ನಡಿಗರಿದ್ದರು.

ಬೆಳಗಾವಿಯು ಪ್ರಾಚೀನ ಇತಿಹಾಸ ಹಾಗೂ ಪ್ರಾಚೀನವಾದ ಸಂಸ್ಕೃತಿಗೆ ಕಾರಣವಾದ ಸ್ಥಳವಾಗಿದ್ದರು ಕೆಲವು ಸ್ಥಳಗಳು ಸಾಮಾನ್ಯವಾಗಿ ಕೇವಲ ಹಿಂದಿನ ಮಹತ್ವಕತೆಗೆ ಗುರುತಿಸಿಕೊಂಡಿದ್ದು ನೈಪತ್ಯಕ್ಕೆ ಸೇರಿರುತ್ತವೆಯಾದರೂ ಬೆಳಗಾವಿಯು ಶಾತವಾಹನರ ಕಾಲದಿಂದಲೂ ಒಂದು ಪ್ರಮುಖ ವಾಣಿಜ್ಯ ಕೇಂದ್ರವೆಂದು ಗುರುತಿಸಿಕೊಂಡಿತ್ತು. ಇಲ್ಲಿ ದೊರೆತ ನಾಣ್ಯಗಳಿಂದ ಬೆಳಗಾವಿ ನಗರವು ಪಾಶ್ಚಾತ್ಯ ರೋಮದೊಂದಿಗೆ ವ್ಯಾಪಾರ ವಹಿವಾಟು ನಡೆಸುತ್ತಿತ್ತೆಂದು ಇತಿಹಾಸಕಾರರಾದ ಡಾ|| ಅ.ಸುಂದರ ಅವರು ಅಭಿಪ್ರಾಯ ಪಡುತ್ತಾರೆ ಅದರಂತೆ ಮುಂದುವರೆದು ಮೊಘಲರ ಆಡಳಿತ ಕಾಲದಲ್ಲಿ ಶಹಾಪೂರ ಒಂದು ಪ್ರಮುಖ ವಾಣಿಜ್ಯ ಕೇಂದ್ರವಾಗಿತ್ತು ಎಂದು ಹೇಳಲಾಗುತ್ತದೆ. ಹೀಗೆ ಪ್ರಾಚೀನ ಕಾಲದಿಂದಲೂ ಪ್ರಸ್ತುತ ಕಾಲದವರೆಗೆ ಬೆಳಗಾವಿಯು ಒಂದು ವಾಣಿಜ್ಯ ನಗರವಾಗಿಯೇ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಇಂದಿಗೂ ಸಹ ಒಂದು ದಕ್ಷಿಣ ಭಾರತದ ವಾಣಿಜ್ಯ ಭಾಗವಾಗಿ ತನ್ನ ತನವನ್ನು ಉಳಿಸಿಕೊಂಡಿದೆ.

ಅದರಂತೆ ಬ್ರಿಟಿಷರ ಆಡಳಿತಾವಧಿಯಲ್ಲಿ ಇಲ್ಲಿಯ ತಂಪು ಹವಾ ಹಿತಕರ ವಾತಾವರಣವು ಬ್ರಿಟಿಷರ ಪ್ರಮುಖ ಸೇನಾ ನೆಲೆ ಹಾಗೂ ಅವರ ಪ್ರಮುಖ ವಾಸಸ್ಥಳವಾಗಿದ್ದು ತನ್ನ ಅಸ್ತಿತ್ವದ ಮಹತ್ವದಿಂದಾಗಿಯೇ ಆಗಿರುವುದು ಬೆಳಗಾವಿ ಮುಂಬೈ ಪ್ರೆಸಿಡೆನ್ಸಿಯ ಪ್ರಮುಖ ಆಡಳಿತದ ಭಾಗವಾಗಿದ್ದು ಬೆಳಗಾವಿಯು 28 ನೇ ಎಪ್ರೀಲ್ 1836 ರಲ್ಲಿ ಜಿಲ್ಲೆಯಾಗಿ ಅಸ್ತಿತ್ವಕ್ಕೆ ಬಂದಿತು. ಕನ್ನಡ ಮರಾಠಿ ಎರಡೂ ಸಂಸ್ಕೃತಿಗಳ ಮಿಶ್ರಣದಿಂದ ಬ್ರಿಟಿಷರ ಆಂಗ್ಲಭಾಷೆ ಪ್ರಭುತ್ವ ಮರಾಠಿಗರ ಮರಾಠಿ ಭಾಷೆಯು ದಬ್ಬಾಳಿಕೆ ಇವುಗಳ ಮಧ್ಯದಲ್ಲಿಯೂ ಕನ್ನಡ ಗಂಡು ಭಾಷೆಯಾಗಿ ಮೈ ಕೊಡವಿಕೊಂಡು ಬೆಳೆದು ನಿಂತಿದೆ ಎರಡು ಗಡಿಗಳ ತಿಕ್ಕಾಟ ಆಗೀಗ ನಡೆಯುತ್ತಿದ್ದರೂ ಕನ್ನಡ, ಮರಾಠಿ ಸಾಂಸ್ಕೃತಿಕವಾದ ಸುಮಧುರವಾದ ಬಾಂಧವ್ಯ ಕೂಡ ಮುಂದುವರೆದುಕೊಂಡು ಬಂದುದು ಬೆಳಗಾವಿಯ ವೈಶಿಷ್ಟ್ಯ.

ಹಿಂದಿನಿಂದಲೂ ಧಾರ್ಮಿಕ ಸಹಿಷ್ಣುತೆ ಹೊಂದಿರುವ ಪ್ರದೇಶವಾದ ಬೆಳಗಾವಿಯು ಸಾ.ಶ.ಪೂ ಮೂರನೇ ಶತಮಾನದಲ್ಲಿ "ಯದುಗ್ರಾಮ" ವಾಗಿತ್ತು ಜೈನಧರ್ಮಿಯ ಜಕ್ಕದೇವ 800 ಹಳ್ಳಿಗಳನ್ನು ಆಳುತ್ತಿದ್ದನು ಮುಂದೆ ಕುಂತಳ ನಾಡಿನ ಕುಂಹುಣ (ಕುವಂಡಿ–3000) ಪ್ರದೇಶವೆಂದು ಕ್ರಿ.ಶಕ 930 ರವರೆಗೆ ರಟ್ಟದೊರೆಗಳು ಆಳಿದರು ಹಿಂದೂ ದೊರೆಗಳಾದ ವಿಜಯನಗರದ ಅರಸರು ಕ್ರಿ.ಶ 1375 ರಿಂದ 1422 ರವರೆಗೆ ಆಳ್ವಿಕೆಗೆ ಒಳಪಡಿಸಿದ್ದರು ನಂತರದಲ್ಲಿ ಮುಸ್ಲಿಂ ದೊರೆಗಳಾದ ಬಹುಮನಿ ಅರಸರು ಹಾಗೂ ಆದಿಲ್‌ಶಾಹಿ ಅರಸರ ಸರದಾರ ಅಸದ್‌ಖಾನ್ ಎಂಬ ಮುಸ್ಲಿಂ ಸರದಾರನ ಆಡಳಿತವು ಕ್ರಿ.ಶ. 1511

ರಿಂದ 1549 ರವರೆಗೆ ಮುಂದುವರೆಸಿದನು ಮತ್ತೆ ಹಿಂದೂ ಅರಸರಾದ ಮರಾಠ ಪೇಶ್ವೆಗಳ ನಂತರ ಕ್ರೈಸ್ತಧರ್ಮಾವಲಂಬಿಗಳಾದ ಬ್ರಿಟಿಷರು ಕ್ರಿ.ಶ 1818 ರಿಂದ ಸ್ವಾತಂತ್ರ್ಯದವರೆಗೆ ಹೀಗೆ ಅನೇಕ ಜಾತಿ,ಮತಗಳ ಆಳರಸರ ಆಡಳಿತಕ್ಕೆ ಒಳಪಟ್ಟು ಬೆಳಗಾವಿಯು ಮತ್ತೆ ಮತ್ತೆ ಬೇರೆ ಬೇರೆ ಧರ್ಮ, ಜಾತಿಗಳ ಬೆಸೆತಕ್ಕೆ ಒಳಪಟ್ಟು ತನ್ನದೇ ಆದ ಸಾಂಸ್ಕೃತಿಕ ಬೆಳವಣಿಗೆಗೆ ಕಾರಣವಾಗಿದೆ. ಬೆಳಗಾವಿಯಲ್ಲಿ ಜೈನರು, ಬೌದ್ಧರು, ವೀರಶೈವರು, ಲಿಂಗಾಯತರು, ವೈಷ್ಣವರು, ಕ್ರೈಸ್ತರು, ಮುಸ್ಲಿಂಮರ ಮಧುರ ಬಾಂಧವ್ಯದಿಂದ ಬದುಕುತ್ತಿರುವುದು ಧಾರ್ಮಿಕ ಸಹಿಷ್ಣುತೆಗೆ ಸಾಕ್ಷಿಯಾಗಿದೆ. ಕ್ರಿ..ಶ 1911 ರ ಜನಗಣತಿ ಪ್ರಕಾರ ಹಿಂದೂಗಳು ಒಟ್ಟು ಜನಸಂಖ್ಯೆಯಲ್ಲಿ-93,537, ಮುಸ್ಲಿಂಮರು-12,550, ಜೈನರು-2741 ಹಾಗೂ ಎಲ್ಲಾ ಜನಾಂಗಗಳು ಸೇರಿಸಿ 1,12,393 ಇರುವುದು ಬೆಳಗಾವಿಯು ಎಲ್ಲಾ ಜಾತಿ, ಜನಾಂಗ, ಧರ್ಮಗಳ ಸಾಮರಸ್ಯ, ಸಮನ್ವಯದ ಭೂಮಿ ಎಂಬುದಕ್ಕೆ ಸಾಕ್ಷಿಯಾಗಿದೆ ಬೆಳಗಾವಿಯ ಮೂಲ ನಿವಾಸಿಗಳು 1) ಜೈನರು 2) ಲಿಂಗಾಯತರು 3) ಭೋವಿಗಳು 4) ನೇಕಾರರು 5) ಮೇದಾರರು 6) ಹರಿಜನರು 7) ದೇಶಸ್ಥ ಬ್ರಾಹ್ಮಣರು 8) ಭಾರತೀಯ ಕ್ರಿಶ್ಚಿಯನ್ನರು 9) ಕುರುಬರು ಮೇಲಿನ ಜಾತಿ, ಜನಾಂಗಗಳ ನೆಲೆಸಿರುವುದು ನೋಡುವುದರಿಂದ ಬೆಳಗಾವಿ ಕನ್ನಡ ಕುಲದವರೆಂಬುದು ಕಂಡು ಬರುತ್ತದೆ.

ಕನ್ನಡದ ನೆಲವೇ ಬೆಳಗಾವಿ ಎಂಬುವುದಕ್ಕೆ ಇಲ್ಲಿಯ ನೆಲ, ಜಲ, ಸಂಸ್ಕೃತಿ ಕನ್ನಡ ಮಯವಾಗಿರುವುದು ಕರ್ನಾಟಕ ಎಂಬ ಹೊಸ ರಾಜ್ಯದ ಉದಯಕ್ಕೆ ಕಾರಣವಾದ ಕರ್ನಾಟಕ ಏಕೀಕರಣದ ಹೊಳಪು ಕಂಡದ್ದು ಕರ್ನಾಟಕದ ಗಂಡು ನೆಲ ಬೆಳಗಾವಿಯಲ್ಲಿಯೇ 1924 ರಲ್ಲಿ ಕಾಂಗ್ರೇಸ್ ಅಧಿವೇಶನ ಸಮಾವೇಶಗೊಂಡಿದ್ದು ಮಹಾತ್ಮಾ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡು ಅಧಿವೇಶನವನ್ನು 'Karnataka Session' ಎಂದು ಅಧಿವೇಶನ ನಡೆದ ಸ್ಥಳವನ್ನು 'ವಿಜಯನಗರವೆಂದು', ನೀರು ಸರಬರಾಜು ಮಾಡಿದ ಭಾವಿಯನ್ನು 'ಪಂಪಾಸರೋವರ'ವೆಂದು ಹೆಸರಿಟ್ಟಿದ್ದು ಹಾಗೂ ಹುಯಿಲುಗೋಳ ನಾರಾಯಣರಾಯರು "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎಂಬ ಏಕೀಕರಣದ ಹೊಸನಾಡು, ಕನ್ನಡ ಮಾತನಾಡುವ ಮತ್ತು ಕನ್ನಡಿಗರದ್ದೆ ಆದ ಕರ್ನಾಟಕ, ಕರ್ನಾಟಕತ್ವ ತಲೆ ಎತ್ತಿ ಮಿಂಚುವಂತಾದ ಭೂಮಿ ಅದು ಮುಂಬೈ ಕರ್ನಾಟಕದ ಭಾಗವಾದ ಬೆಳಗಾವಿಯಲ್ಲಿ ಈ ಪ್ರದೇಶವು ಕನ್ನಡದ ಗಂಡು ಮೆಟ್ಟು ಎಂಬ ದಿಟ್ಟ ಮತ್ತು ಸ್ಪಷ್ಟ ಸಂಕೇತ ಸ್ತಂಬವನ್ನು ಅಂದೆ ನೆಟ್ಟದಾದುದು ಇದಕ್ಕೆ ಸಾಕ್ಷಿ ಅದೇ ವರ್ಷ ಬೆಳಗಾವಿಯಲ್ಲಿಯೇ ಮೊಟ್ಟ ಮೊದಲ ಏಕೀಕರಣ ಪರಿಷತ್ತು ಸರ್.ಸಿದ್ದಪ್ಪ ಕಂಬಳಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಮುಂಬಾಯಿ ಪ್ರೆಸಿಡೆನ್ಸಿಯ ದಕ್ಷಿಣ, ಈ ದಕ್ಷಿಣ ಜಿಲ್ಲೆಗಳನ್ನು ದಕ್ಷಿಣ ಮಹಾರಾಷ್ಟ್ರ ಎಂದು ಕರೆಯದೇ ಈ ಪ್ರದೇಶವನ್ನು ಮುಂಬಾಯಿ ಕರ್ನಾಟಕ ಎಂದು ಕರೆದುದು ಕರ್ನಾಟಕ , ಕನ್ನಡಿಗ ಎಂಬ ಅಂಶವು ಅಲ್ಲಿ ಅರ್ಥಪೂರ್ಣವಾಗಿದ್ದುದಕೆ ಸಾಕ್ಷಿಯಂತಿದೆ. 1925 ರಲ್ಲಿ

ಬೆಳಗಾವಿಯಲ್ಲಿ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನ ಬೆನಗಲ್ ರಾಮರಾಯರ ಅಧ್ಯಕ್ಷತೆಯಲ್ಲಿ ನಡೆದುದು ಇದೇ ನೆಲವಾದ ಬೆಳಗಾವಿಯಲ್ಲಿ 1929 ರಲ್ಲಿ ಎರಡನೇ ಬಾರಿಗೆ ಅಖಿಲ ಕರ್ನಾಟಕ ಕನ್ನಡ ಸಮ್ಮೇಳನವು ಜರುಗಿದ್ದು ಕನ್ನಡದ ಸಾಂಸ್ಕೃತಿಕ, ಸಾಹಿತ್ಯಿಕ ಶ್ರೀಮಂತಿಕೆ ಮೆರೆಸಿತು ಇದೇ ಸಮ್ಮೇಳನದಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರರು ಸಮ್ಮೇಳನಾಧ್ಯಕ್ಷರಾಗಿದ್ದರು ಕ್ರಿ.ಶ 1939 ರಲ್ಲಿ ಮೂರನೇ ಬಾರಿಗೆ ಅಖಿಲ ಕರ್ನಾಟಕ ಕನ್ನಡ ಸಾಹಿತ್ಯ ಸಮ್ಮೇಳನವು ಮುದವೀಡು ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಕನ್ನಡದ ರಾಜ ವೈಭವಕ್ಕೆ ಕದಂಬರ ಕಾಲದಿಂದಲೂ ಬೆಳಗಾವಿಗೆ ಒಂದು ಮಹತ್ವವಿದೆ. ಇಂದು ಕೃಷ್ಣೆಯ ಉತ್ತರಕ್ಕೆ ಗೋದಾವರಿಯವರೆಗೆ ಪಶ್ಚಿಮ ಘಟ್ಟಗಳ ಪೂರ್ವದ ತಪ್ಪಲು ಸೀಮೆಯಲ್ಲಿ ಮಹಾರಾಷ್ಟ್ರ ಎಂದು ಹೆಸರಿಸಿಕೊಂಡರು ಈ ಪ್ರದೇಶವು ಮೊದಲು ಕನ್ನಡ ನಾಡೇ ಆಗಿತ್ತು

ಮಹಾರಾಷ್ಟ್ರದ ಪ್ರಸಿದ್ದ ನಾಯಕರಾದ ಲೋಕಮಾನ್ಯ ಬಾಲಗಂಗಾಧರ ತಿಲಕರು ಅನೇಕ ಸಾರಿ ಬೆಳಗಾವಿಗೆ ಭೇಟಿನೀಡಿ ಇಲ್ಲಿ ಸಾರ್ವಜನಿಕ ಗಣೇಶ ಉತ್ಸವಕ್ಕೆ ಚಾಲನೆ ನೀಡಿದ ಚೌಕವನ್ನು ಇಂದಿಗೂ ತಿಲಕ ಚೌಕ ಎಂತಲೆ ಕರೆಯುತ್ತಾರೆ ಇಂಥಹ ತಿಲಕರೇ "ಬೆಳಗಾವಿಯು ಕರ್ನಾಟಕದ ಹೆಬ್ಬಾಗಿಲು" ಎಂದು ಕರೆದರು ಕನ್ನಡ-ಮರಾಠಿ ಭಾಷೆಗಳ ಸಾಂಸ್ಕೃತಿಕ ವಿಚಾರಗಳ ಹಿನ್ನೆಲೆಯಲ್ಲಿ ಎರಡೂ ಭಾಷೆಗಳ ಕುರಿತಂತೆ " ಸಂಸ್ಕೃತಿ ಒಂದೇ ಭಾಷೆಗಳು ಮಾತ್ರವೇ ಬೇರೆ ಬೇರೆ" ಎಂಬ ಪ್ರಸಿದ್ದ ಮರಾಠಿ ಚಿಂತಕರಾದ ಶ್ರೀಮತಿ ದುರ್ಗಾಬಾಯಿ ಭಾಗವತ ಅವರ ಅಭಿಪ್ರಾಯವು ಅತ್ಯಂತ ಸಮರ್ಥನೀಯ ವೆನಿಸುತ್ತದೆ. ಸುಮಾರು ಐದುನೂರು ವರ್ಷಗಳ ಕಾಲ ಕನ್ನಡ ರಾಜರು ಈಗಿನ ಮಹಾರಾಷ್ಟ್ರದ ಬಹುಭಾಗವನ್ನು ಆಳದ್ದು ಹಾಗೂ ಮರಾಠ ರಾಜರು ಕರ್ನಾಟಕದ ಕೆಲಭಾಗಗಳು ವಿಶೇಷವಾಗಿ ಬೆಳಗಾವಿಯ ಭಾಗಗಳನ್ನು ನೇರವಾಗಿ ಸಂಸ್ಥಾನೀಕರಾಗಿಯೂ ಹಲವಾರು ವರ್ಷಗಳ ಕಾಲ ಆಡಳಿತ ಮಾಡಿದ್ದುದರ ಹಿನ್ನೆಲೆಯಲ್ಲಿ ಈ ಎರಡೂ ಭಾಷಿಕ ಪ್ರದೇಶಗಳ ನಡುವೆ ಸಾಂಸ್ಕೃತಿಕವಾಗಿಯೂ ಕೊಡು-ಕೊಳ್ಳುವ ನಿರಂತರತೆಯಿಂದ ಸಾಂಸ್ಕೃತಿಕ ಭಾಂದವ್ಯದ ಕುರುಹುಗಳು ಕಂಡು ಬಂದರೂ ಮತಪಂಥ, ರಾಜಕೀಯ ಸಾಮಾಜಿಕ ಅಂಶಗಳಲ್ಲಿ ಪರಸ್ಪರ ಪ್ರಭಾವಗಳು ಕಂಡು ಬರುವುದು ಸಹಜವಾಗಿದ್ದರು ಹಿಂದಿನಿಂದಲೂ ಚಾರಿತ್ರಿಕವಾಗಿ ನಾವು ಗಮನಿಸಿದಾದ ಬೆಳಗಾವಿಯ ಇತಿಹಾಸದ ಹಂತ ಹಂತವಾದ ಹಿನ್ನೆಲೆಯಲ್ಲಿ ಬೆಳಗಾವಿಯು ನಿಸ್ಸಂಶಯವಾಗಿ ಕನ್ನಡ ನೆಲವೇ ಆಗಿದೆ ಎಂಬುದು ಅಷ್ಟೇ ಸತ್ಯವಾದ ಅಂಶವಾಗಿದೆ. ಭಾಷೆ, ಸಂಸ್ಕೃತಿ,ನೆಲ, ಜಲ ಮುಂತಾದ ಅಂಶಗಳನ್ನು ಮೀರಿಯೂ ಬೆಳಗಾವಿಯಲ್ಲಿ ಕನ್ನಡ, ಕನ್ನಡಿಗ, ಕನ್ನಡತ್ವ, ಕರ್ನಾಟಕದ ಅಂಶಗಳ ಸ್ಪಷ್ಟವಾಗಿ ಗೋಚರಿಸುತ್ತವೆ ಅನೇಕ ಸಂಸ್ಕೃತಿ, ಭಾಷೆಗಳನ್ನು ಮೇಳೈಸಿಕೊಂಡೂ ಸಹ ಬೆಳಗಾವಿಯು ಅಚ್ಚ ಕನ್ನಡ ನೆಲವಾಗಿ ಉಳಿದಿದೆ.

ಮುಂಬೈ ಪ್ರೆಸಿಡೆನ್ಸಿಯ ಬೆಳಗಾವಿ ಪ್ರದೇಶವು ಚಾರಿತ್ರಿಕವಾಗಿ ಗ್ರಹಿಸಿದಾಗ ಅಚ್ಚ ಕನ್ನಡ ನೆಲ ಕನ್ನಡ ಸಂಸ್ಕೃತಿಕ ನೆಲೆಯಾಗಿದ್ದರೂ ತನ್ನಲ್ಲಿ ಅನೇಕ ಜಾತಿ, ಧರ್ಮ, ಸಂಸ್ಕೃತಿಗಳನ್ನು ಮೈಗೂಡಿಸಿಕೊಂಡಿದ್ದು ಅನೇಕತೆಯಲ್ಲಿಯೂ ಏಕತೆಗೆ ಸಾಕ್ಷಿಯಾದಂತಹ ಪ್ರದೇಶವೆನಿಸಿಕೊಂಡಿದೆ. ವೈವಿಧ್ಯತೆಯನ್ನು ಮೇಳೈಸಿಕೊಂಡು ತನ್ನತನವನ್ನು ಬಿಟ್ಟುಕೊಡದ ಗಟ್ಟಿತನವನ್ನು ತನ್ನಲ್ಲಿ ಉಳಿಸಿಕೊಂಡಂತಹ ಭೂಮಿ ಬೆಳಗಾವಿಯಾಗಿದೆ.

## ಆಧಾರ ಗ್ರಂಥಗಳು

1) ಗವಿಮಠ ಬಿ.ಎಸ್–ಬೆಳಗಾವಿ–ಕನ್ನಡ–ಕನ್ನಡಿಗ–ಪ್ರಧಾನ ಸಂಪಾದಕರು–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು–2011

2) ಗೋವಿಂದರಾಜು.ಸಿ.ಆರ್–ಚಾರಿತ್ರಿಕ ಕರ್ನಾಟಕ–ಸುವರ್ಣ ಕರ್ನಾಟಕ ಸಂಪುಟ–ಸಂಪಾದಕರು–ಗ್ರಂಥಾಲಯ ಸಮಿತಿ, ಕರ್ನಾಟಕ ವಿಧಾನ ಮಂಡಲ ವಿಧಾನಸೌದ–ಬೆಂಗಳೂರು–2011

3) ಚಿಂತಾಮಣಿ ಜೋರಾಪೂರ.ಕೆ–ಬೆಳಗಾವಿ ಕನ್ನಡ ಚಳುವಳಿಗಳು ಮತ್ತು ನಾಡಹಬ್ಬ–ಪ್ರಹ್ಲಾದ ಪ್ರಕಾಶನ,ಬೆಳಗಾವಿ–2017

4) ವಿಠ್ಠಲರಾವ್ ಗಾಯಕವಾಡ.ಟಿ–ಕನ್ನಡ–ಮರಾಠಿ ಸಾಂಸ್ಕೃತಿಕ ಬಾಂಧವ್ಯ–ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ–2012